ಹಾಗೆ ಅಳೆದು ಆ ಜೋಡಿಯನ್ನು "ಹಾಲು ಮುಕ್ಕ, ಜೇನು ಮುಕ್ಕ ಅಥವಾ ಮಣ್ಣು ಮುಕ್ಕ" ಎಂದು ವರ್ಗೀಕರಿಸುವುದು. ಅಷ್ಟೇ ಅಲ್ಲ. ಆ ಜೋಡಿ ಎದುರಿಗೇ ಅದನ್ನು ಹೇಳಿಯೂ ಬಿಡುತ್ತಿದ್ದಳು. ಒಂದು ವೇಳೆ ಆಕೆ ಮರೆತರೂ ಇತರರು, ''ಪುಲ್ಲಕ್ಕೋ, ಈಡು ಜೋಡು ಹೆಂಗೈತೆ, ಏನು ಮುಕ್ಕ" ಎಂದು ನೆನಪಿಸುತ್ತಿದ್ದರು. ಆಕೆಯ ಬಾಯಾರೆ ಆ ವಿಶ್ಲೇಷಣೆಯನ್ನು ಕೇಳಲು ಎಲ್ಲರಿಗೂ ಕಾತುರ. ಊರಿನಲ್ಲೇ ಬೆಳೆದ ಹುಡುಗನಿಗೋ, ಹುಡುಗಿಗೋ ಪುಲ್ಲಕ್ಕನ ಈ ಜೋಡಿ ವಿಶ್ಲೇಷಣೆ ಬಗ್ಗೆ ಮೊದಲೇ ಗೊತ್ತಿರುತ್ತಿತ್ತು. ಆದರೆ ಬೇರೆ ಊರಿನ ವಧುವೋ ವರನೋ ಆಗಿದ್ದರೆ ಗೊಂದಲದಲ್ಲಿ ಬೀಳುತ್ತಿದ್ದರು.

ಅದು ಒಂದು ಕಡೆ ಇರಲಿ, ಆ ವರ್ಗೀಕರಣದ ಅರ್ಥವನ್ನು ನೋಡೋಣ. ಹುಡುಗಿ ಉದ್ದವಿದ್ದು ಹುಡುಗ ತುಂಡ ಇದ್ದರೆ ಹಾಲು ಮುಕ್ಕ ಎಂತಲೂ, ಹುಡುಗಿ ತುಂಡ ಇದ್ದು, ಹುಡುಗ ಉದ್ದ ಇದ್ದರೆ ಮಣ್ಣು ಮುಕ್ಕ ಎಂತಲೂ, ಇಬ್ಬರೂ ಸಮ ಸಮ ಇದ್ದರೆ ಜೇನು ಮುಕ್ಕ ಎಂತಲೂ ಅರ್ಥ. ಮುಂದಿನದು ಪಳಗಿದ ಓದುಗರಾದ ನಿಮ್ಮ ಊಹೆಗೇ ಬಿಟ್ಟಿದ್ದು. ಬೆಲ್ಲಂಪುಲ್ಲಕ್ಕ ತನ್ನ ಎರಡೂ ಕೈಗಳ ತೋರು ಬೆರಳುಗಳನ್ನು ಎದುರಾಬದುರಾ ಹಿಡಿದು ಪ್ರಾತ್ಯಕ್ಷಿಕೆ ಮಾಡುತ್ತಿದ್ದಳು. ಅದನ್ನು ನೋಡಲು ನಮ್ಮೂರ ಯುವಪಡೆ – ಅದರಲ್ಲೂ ಹೆಣ್ಣುಮಕ್ಕಳು ಮುಗಿಬೀಳುತ್ತಿದ್ದರು. ಕೇಕಲಕೋ ಎಂಬ ನಗು ಬೇರೆ ಜೊತೆಯಾಗುತ್ತಿತ್ತು.

ಅದು ವಯಸ್ಕರ ಶಿಕ್ಷಣ ಕ್ಲಾಸುಗಳು ನಡೆಯುತ್ತಿದ್ದ ಕಾಲ. ಒಂದು ದಿನ ಸಂಯೋಜಕರು ಪರಿವೀಕ್ಷಣೆಗೆಂದು ತರಗತಿಗೆ ಬಂದಿದ್ದರು. ಟೀಚರುಗಳು ದೊಡ್ಡವರು ಬಂದಿದ್ದಾರೆಂದು ಊರಿನ ಅವರಿವರನ್ನು ತಂದು ಕೂರಿಸಿದ್ದರು. ನಂಬರ್ ಹೆಚ್ಚಾಗಿ ಕಾಣಲಿ ಅಂತ. ಅದರಲ್ಲಿ ಬೆಲ್ಲಂಪುಲ್ಲಕ್ಕನೂ ಕುತೂಹಲದಿಂದ ಬಂದು ಕುಂತಿತ್ತು. ಸಂಯೋಜಕರು ಶಿಕ್ಷಣದ ಮಹತ್ವದ ಬಗ್ಗೆ ಭಾವಾವೇಶದಲ್ಲಿ ಮಾತಾಡಿದರು. ಅದು ಮುಗಿದಮೇಲೆ, ''ಎಲ್ಲಿ, ನಾನು ಕೆಲವು ಘೋಷಣೆ ಕೂಗ್ತೀನಿ, ನೀವೂ ಹಾಗೇ ಕೂಗಿ" ಎಂದರು. ವಿಧೇಯ ವಯಸ್ಕ ವಿದಾರ್ಥಿಗಳು 'ಹೂನ್ ಸಾ' ಎಂದರು.

ಮೊದಲು 'ಕಲಿಯಿರಿ; ಕಲಿಸಿರಿ', 'ಅಕ್ಷರ ಕಲಿಯೋಣ; ಹೆಬ್ಬೆಟ್ಟು ಗುರುತು ಅಳಿಸೋಣ' ಬಂದವು, ಅದರ ಹಿಂದೆಯೇ 'ದುಡ್ಡೇ ದೊಡ್ಡಪ್ಪ; ವಿದ್ಯೆ ಅವರಪ್ಪ' ಸ್ಲೋಗನ್ನುಗಳನ್ನು ಹೇಳಿಕೊಟ್ಟಾಗ ಎಲ್ಲರೂ ಉತ್ಸಾಹದಿಂದಲೇ ಪುನರುಚ್ಚರಿಸಿದರು.

ಉತ್ತೇಜಿತರಾದ ಸಂಯೋಜಕರು ದೊಡ್ಡ ದನಿಯಲ್ಲಿ, 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎಂದು ಬಲಗೈಯನ್ನು ಮೇಲೆತ್ತಿ ಕೂಗಿದರು. ಆದರೆ ವೃದ್ಧ ವಿದ್ಯಾರ್ಥಿಗಳು ಕಮಕ್ ಕಿಮಕ್ ಎನ್ನಲಿಲ್ಲ. ಬದಲಿಗೆ ಒಬ್ಬರಿಗೊಬ್ಬರು ಮುಖ ಮುಖ ನೋಡಿಕೊಂಡರು. ಮುಜುಗರಗೊಂಡ ಸಂಯೋಜಕರು ಮತ್ತೊಮ್ಮೆ ಹೇಳಿದರು. ಈ ಸಲ ಮುಸಿ ಮುಸಿ ನಗು. ಬೆಲ್ಲಂಪುಲ್ಲಕ್ಕನಂತೂ ನಗು ತಡೆಯದೇ ಸೆರಗು ಬಾಯಿಗಿಟ್ಟುಕೊಂಡು ಕೆಕ್ಕೆಕ್ಕೋ ಅಂದೇಬಿಟ್ಟಿತು. ಏನಾಗುತ್ತಿದೆ ಎಂದು ತಿಳಿಯದೆ ಕಕ್ಕಾಬಿಕ್ಕಿಯಾದ ಅವರು, ''ಯಾಕಮ್ಮ ಏನಾಯ್ತು, ನನ್ ಮುಕದಲ್ಲೇನಾದ್ರೂ ಕೋತಿ ಕುಣೀತಿದೆಯೇ'' ಅಂದರು. ''ಅದುಕ್ಕಲ್ಲ ಸಾ, ನಮ್ಮೂರ್ ಕಡೆ ಸ್ಯಾಲೆ ಅಂದ್ರೆ ಸೀರೆ ಅಮ್ತು, ನೀವು ಹೆಣ್ ಮಕ್ಕಳು ಕಲುತ್ರೆ ಸ್ಯಾಲೆ ತೆರೆದಂಗೆ ಅಂದ್ರಲ್ಲ, ಅದುಕ್ಕೇ ನೆಗ ಬಂತು" ಎಂದು ಪುಲ್ಲಕ್ಕ ಹೇಳಿದ್ದೇ ತಡ ಈ ಸಲ ಎಲ್ಲರೂ ನಗಾಡತೊಡಗಿದರು. ''ಐಶೀ'' ಎನ್ನುತ್ತಾ ಸಂಯೋಜಕರೂ ಹುಳ್ಳಗೆ ಮುಖ ಮಾಡಿಕೊಂಡರು.

ಈ 'ಸ್ಯಾಲೆ' ಪ್ರಸಂಗ ತುಂಬಾ ದಿನ ಊರಲ್ಲಿ ಜೀವಂತವಾಗಿತ್ತು.

ಒಮ್ಮೆ ಕೃಷಿ ಸೆನ್ಸಸ್ ಮಾಡುವ ಯಾವುದೋ ಖಾಸಗಿ ಕಂಪನಿಯವರು ಈಕೆಯ ಕೈಗೆ ಸಿಲುಕಿ ಪಡಬಾರದ ಪಾಡು ಪಟ್ಟಿದ್ದು ನಮ್ಮೂರಲ್ಲಿ ಬಹುಕಾಲ ಜನಪದ ಕತೆಯೇ ಆಗಿತ್ತು. ಆ ಐತಿಹಾಸಿಕ ಸಂಭಾಷಣೆಯ ತುಣುಕು ಹೀಗಿದೆ: